Vivekananda Rural First Grade College LIBRARY

# ಎರಡನೇ ಸೆಮಿಸ್ಟರ್ ಬಿ.ಸಿ.ಎ. ಪರೀಕ್ಷೆ, ಜೂನ್ / ಜುಲೈ 2026
## (SEP 2025 – 26) (Freshers)
## ಕನ್ನಡ ಭಾಷಾ ಪತ್ಯ – 2
## ಗಣಕ ಕನ್ನಡ – 2

ಸಮಯ : 3 ಗಂಟೆಗಳು    ಗರಿಷ್ಠಾಂಕಗಳು : 80

I. ಆರು ಪ್ರಶ್ನೆಗಳಿಗೆ ಉತ್ತರಿಸಿ (40 ಪದಗಳಿಗೆ ಮೀರದಂತೆ) : (6×2=12)

1) 'ಸುಟ್ಟರೂ ಹುಟ್ಟಿ' ಎಂಬ ಸಾಲು ಏನನ್ನು ಸೂಚಿಸುತ್ತದೆ ?

2) ಸ್ನೇಹಿತನು ಕಂಪನಿಯಲ್ಲಿ ಎದುರಿಸಿದ ಸಮಸ್ಯೆ ಯಾವುದು ?

3) ಪಿಶಾಚಿಯ ಉದ್ದೇಶ ಏನಾಗಿತ್ತು ?

4) ಯಾವುದರ ಜೊತೆಗೂಡಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತವೆ ಎಂದು ಅಕ್ಕ ಹೇಳುತ್ತಾಳೆ ?

5) ದೇವರಲ್ಲಿ ಕವಯಿತ್ರಿಯ ಪ್ರಾರ್ಥನೆ ಏನು ?

6) ಜಯದ್ರಥನ ವ್ಯಕ್ತಿತ್ವ ಎಂಥಹುದು ?

7) ರೇಖಾ ತನಗಾಗುವ ಮಗುವನ್ನು ವೀಣಾಳಿಗೆ ಕೊಡಲು ಕಾರಣವೇನು ?

8) ಪಾಂಡೋರಾ ಪೆಟ್ಟಿಗೆ ಎಂದರೇನು ?

II. ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ (80 ಪದಗಳಿಗೆ ಮೀರದಂತೆ) : (4×5=20)

1) ಹೆಣ್ಣು ನೋಡುವ ಶಾಸ್ತ್ರದಲ್ಲಿರುವ ಅಸಹಜತೆಯ ಬಗ್ಗೆ ಲೇಖಕಿಯ ದೃಷ್ಟಿಕೋನವೇನು ? ತಿಳಿಸಿ.

2) ವಿಮಾನ ಪ್ರಯಾಣದ ವೇಳೆ ನರೇಟರ್ ಅನುಭವಿಸಿದ ಮನಃಸ್ಥಿತಿಯನ್ನು ತಿಳಿಸಿ ಕೊಡಿ.

3) ಪಿಶಾಚಿ ಪಾತಾಳಲೋಕಕ್ಕೆ ದಬ್ಬಾಗಿ ಬೀಳಲು ಕಾರಣವೇನು ?

4) ಸಂಗವ್ವಜ್ಜಿ ಹಾಗೂ ಸುನಂದಿಯ ಬಾಂಧವ್ಯವನ್ನು ಪರಿಚಯಿಸಿ.

5) ಕಾರಿನ ಚಾಲಕ ಮೂರ್ಛೆ ಹೋಗಲು ಕಾರಣವೇನು ?

6) ಬುರ್ಖಾಧಾರಿಯನ್ನು ಕಂಡು ಕವಯಿತ್ರಿ ಸರಿದುಕೊಳ್ಳಲು ಕಾರಣವೇನು ?

III. ಮೂರು ಪ್ರಶ್ನೆಗಳಿಗೆ ಉತ್ತರಿಸಿ (**160** ಪದಗಳಿಗೆ ಮೀರದಂತೆ) : **(3×10=30)**

1) ಸ್ನೇಹಿತನ ಮಾತುಗಳ ಮೂಲಕ ಸಮಾಜದಲ್ಲಿನ ಅಸಮಾನತೆಯನ್ನು ಲೇಖಕ ಹೇಗೆ ಬಿಂಬಿಸಿದ್ದಾನೆ ?

2) ಸತ್ಯಕ್ಕ ಹಾಗೂ ಮೋಳಿಗೆ ಮಹಾದೇವಿಯರ ವಚನಗಳಲ್ಲಿನ ಪ್ರಧಾನ ಅಂಶಗಳನ್ನು ಕುರಿತು ಬರೆಯಿರಿ.

3) 'ನನ್ನೂರಿಗೆ ಮನುಷ್ಯರನ್ನು ಹುಟ್ಟಿಸಿ ಕಳಿಸು ದೇವಾ' ಕವಿತೆಯು ಧ್ವನಿಸುವ ವಿಡಂಬನೆಯನ್ನು ವಿಶ್ಲೇಷಿಸಿ.

4) ಗಂಡ–ಹೆಂಡತಿಯ ಸಾಮರಸ್ಯ ಜೀವನವನ್ನು 'ಕಿಚನ್ ಪ್ಯಾರಡೈಸ್' ಕಥೆಯ ಹಿನ್ನೆಲೆಯಲ್ಲಿ ವಿವರಿಸಿ.

5) ರಾಜನಾದ ಕಾರುಚಾಲಕ ರಾಣಿಯನ್ನು ಮದುವೆಯಾದ ಸಂದರ್ಭವನ್ನು ವಿವರಿಸಿ.

IV. ವರ್ಗಾವಣೆ ಪತ್ರಕೋರಿ ನಿಮ್ಮ ಪ್ರಾಂಶುಪಾಲರಿಗೆ ಅರ್ಜಿ ಬರೆಯಿರಿ. **(1×5=5)**

V. ನಿಮ್ಮ ಕಾಲೇಜಿನಲ್ಲಿ ನಡೆದ AI ಕುರಿತ ಕಾರ್ಯಾಗಾರದ ಬಗ್ಗೆ ವರದಿ ಬರೆಯಿರಿ. **(1×5=5)**

VI. ಕೆಳಗೆ ಕೊಟ್ಟಿರುವ ಕಂಡಿಕೆಯನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ಕೊಡಿ. **(1×4=4)**

ಗಣಕಯಂತ್ರದ ಮೂಲಭೂತ ಮಾದರಿಯನ್ನು 1940ರಲ್ಲೇ ವಿಜ್ಞಾನಿಗಳು ಕಂಡುಹಿಡಿದರು. ಗಣಕಯಂತ್ರದ ಕಾರ್ಯವೈಖರಿಯಿಂದ ಪ್ರೇರಿತರಾಗಿ ಕೆಲವು ವಿಜ್ಞಾನಿಗಳು ಆಗಲೇ Electronic Brain ಸೃಷ್ಟಿಸುವ ಬಗ್ಗೆ ಯೋಚನೆ ಮಾಡಿದ್ದರೂ, ಈ ವಿಷಯದಲ್ಲಿ ಗಮನಾರ್ಹ ಬೆಳವಣಿಗೆಯಾದದ್ದು ಮಾತ್ರ ಇತ್ತೀಚೆಗೆ 21ನೇ ಶತಮಾನದಲ್ಲಿಯೇ. ಹಠಬಿಡದ ವಿಜ್ಞಾನಿಗಳ ಪರಿಶ್ರಮದ ಫಲವಾಗಿ ಯಂತ್ರಕಲಿಕೆ ಮೂಲಕ ವೇಗವಾಗಿ ಕೆಲಸ ಮಾಡುವ ಗಣಕಯಂತ್ರಗಳಿಂದ ಇಂದು ಇದು ನನಸಾಗಿದೆ. ಇದರ ಫಲವಾಗಿ ವಿವಿಧ ರೋಬೋಗಳು ಜೀವ ತಳೆದಿವೆ. ಇವು ಮನುಷ್ಯ ಮಾತುಗಳನ್ನು ಆಲಿಸುವುದು, ಮುಖಚರ್ಯೆ, ಧ್ವನಿಯ ಏರಿಳಿತಗಳು, ಸನ್ನೆಗಳು ಮುಂತಾದವನ್ನು ಗುರುತು ಹಿಡಿಯುವುದು, ಅರ್ಥ ಮಾಡಿಕೊಳ್ಳುವುದು, ಕಣ್ಣಲ್ಲಿ ಕಣ್ಣಿಟ್ಟು ನೋಡುವುದು ಮಾಡಬಲ್ಲವು. ಮನೋರಂಜಿಸಲು, ವೈದ್ಯರ ಸೇವೆ, ಸಿದ್ಧಮಾಹಿತಿಗಳನ್ನು ಕೊಡಲು 2019ರಲ್ಲಿ ಕುತೂಹಲ ಕೆರಳಿಸಿರುವ ರೋಬೊ ಎಂದರೆ ವಕೀಲ ರೋಬೊ. ಇದು ಸದ್ಯದಲ್ಲೇ ಮುಖ್ಯವಾಹಿನಿಗೆ

ಬರಲಿದೆ ಮತ್ತು ವಂಚಿಸಿದ ಮಾಲೀಕನ ಮೇಲೆ ಮೊಕದ್ದಮೆ ಕೊಡಬಹುದು. ವಿವಾಹ ವಿಚ್ಛೇದನ, ಆಸ್ತಿ ಹಂಚಿಕೆ ಮುಂತಾದವುಗಳನ್ನು ಕಡಿಮೆ ದರದಲ್ಲಿ ಕುಳಿತಲ್ಲಿಯೇ ಬಗೆಹರಿಸಿಕೊಳ್ಳಬಹುದಾಗಿದೆ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಕ್ರಾಂತಿಯನ್ನೇ ಹುಟ್ಟು ಹಾಕಬಹುದಾಗಿದೆ. ವಿಶ್ವಆರ್ಥಿಕ ವೇದಿಕೆಯ ಮಾಹಿತಿಯ ಪ್ರಕಾರ 2028ರ ವೇಳೆಗೆ ಸಮುದ್ರ ತಳವನ್ನು ಜಾಲಾಡುವುದರಿಂದ ಹಿಡಿದು ವೈದ್ಯಕೀಯ ವೃತ್ತಿ, ವಕೀಲ ವೃತ್ತಿ, ಟ್ಯಾಕ್ಸಿ ಚಾಲನೆ, ಅಂಗಡಿಗಳಲ್ಲಿ ಸೇಲ್ಸ್‌ಮನ್‌ರವರೆಗೆ ಸುಮಾರು ಏಳುಕೋಟಿ ಐವತ್ತು ಲಕ್ಷ ಕೆಲಸಗಳನ್ನು ರೋಬೋಗಳ ಲೋಹದ ಕೈಗಳು ನಮ್ಮಿಂದ ಕಿತ್ತುಕೊಳ್ಳಲಿವೆಯಂತೆ. ಆದರೆ ಸಂತೋಷದ ವಿಷಯ ಏನೆಂದರೆ ಇವುಗಳ ಸೃಷ್ಟಿಗೆ ಸುಮಾರು ಹದಿಮೂರು ಕೋಟಿ ಹೊಸ ಉದ್ಯೋಗಗಳು ಹುಟ್ಟಿಕೊಳ್ಳಲಿವೆ. ಅಲ್ಲದೆ ಇವುಗಳಿಂದ ಆರೋಗ್ಯಕ್ಕೆ ಹಾನಿಕಾರಕವಾದ ಜೀವಕ್ಕೆ ಅಪಾಯ ಆಗುವಂತ ಕೆಲಸಗಳನ್ನು ಮಾಡಿಸುವುದರಿಂದ ಮನುಷ್ಯರಿಗೆ ಆಗುತ್ತಿದ್ದ ತೊಂದರೆಗಳನ್ನು ತಪ್ಪಿಸಬಹುದಾಗಿದೆ.

VII. ನಿಮಗೆ ಗೊತ್ತಿರುವ ನಾಲ್ಕು ಗಾದೆ ಮಾತುಗಳನ್ನು ಬರೆಯಿರಿ. (4×1=4)